ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಸ್ವಚ್ಛ ಭಾರತ ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ | ಸ್ವಚ್ಛ ಸಂಕೀರ್ಣ | ಸ್ವಚ್ಛಮೇವ ಜಯತೇ SWACHHA MEVA JAYATE | ಜಲೋತ್ಸವ | ಮನೆ ಮನೆಗೆ ಗಂಗೆ ಜಲ ಜೀವನ ಮಿಷನ್

# ಜಲ ಜೀವನ್ ಮಿಷನ್ ಮೂಲಕ ಸುಸ್ಥಿರ ಅಭಿವೃದ್ಧಿ ಸಾಧಿಸುತ್ತಿದೆ ಆಲಂಕಾರು ಗ್ರಾಮ ಪಂಚಾಯಿತಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 7 ತಾಲ್ಲೂಕುಗಳು ಇದ್ದು, 230 ಗ್ರಾಮ ಪಂಚಾಯಿತಿಗಳಿವೆ. ಜಿಲ್ಲೆಯಲ್ಲಿ 3,34,184 ಮನೆಗಳಿದ್ದು, ಒಟ್ಟು 14,47,760 ಜನಸಂಖ್ಯೆ ಇದೆ. ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನಲ್ಲಿರುವ ಆಲಂಕಾರು ಗ್ರಾಮ ಪಂಚಾಯಿತಿ ಉಪ್ಪಿನಂಗಡಿಯಿಂದ ಶ್ರೀಕ್ಷೇತ್ರ ಸುಬ್ರಹ್ಮಣ್ಯಕ್ಕೆ ತೆರಳುವ ಮಾರ್ಗ ಮಧ್ಯೆ ಸಿಗುತ್ತದೆ. ಕಡಬ ತಾಲ್ಲೂಕಿನಲ್ಲಿ 18 ಗ್ರಾಮ ಪಂಚಾಯಿತಿಗಳ ಪೈಕಿ ಮೊದಲ ಹಂತಕ್ಕೆ ಆಯ್ಕೆಯಾದ 4 ಗ್ರಾಮ ಪಂಚಾಯಿತಿಗಳಲ್ಲಿ ಆಲಂಕಾರು ಗ್ರಾಮ ಪಂಚಾಯತಿ ಕೂಡ ಒಂದು. ಇನ್ನು ಮುಂದುವರೆದು ಆಲಂಕಾರು ಗ್ರಾಮ ಪಂಚಾಯಿತಿ ಮೂರನೇ ಹಂತಕ್ಕೂ ಆಯ್ಕೆ ಮಾಡಲಾಗಿದ್ದು ಕಾಮಗಾರಿಗಳು ಅನುಷ್ಠಾನದ ಹಂತದಲ್ಲಿವೆ.

ಮೊದಲು ಈ ಭಾಗದಲ್ಲಿ ಯಥೇಚ್ಛವಾದ ಮಳೆ ಬೀಳುತ್ತಿದ್ದುದರಿಂದ ಮತ್ತು ಕುಮಾರಧಾರ ನದಿಯೂ ಹತ್ತಿರವಿರುವುದರಿಂದ ನೀರಿನ ಸಮಸ್ಯೆ ಅಷ್ಟೇನೂ ಇರಲಿಲ್ಲ, ಆಧುನಿಕತೆ ಬೆಳೆದಂತೆ ಅದರಲ್ಲೂ ಇತ್ತೀಚೆಗೆ ಮಳೆ ಕಡಿಮೆಯಾದಂತೆ ಕುಡಿಯುವ ನೀರಿನ ಸಮಸ್ಯೆ ಬಿಗಡಾಯಿಸುವ ಸಂದರ್ಭಗಳು ಕಾಣಸಿಗುತಿತ್ತು. ಹೀಗಾಗಿ ಜಲ ಜೀವನ್ ಮಿಷನ್ ಯೋಜನೆಯ ಅಡಿಯಲ್ಲಿ ಆಲಂಕಾರು ಗ್ರಾಮ ಪಂಚಾಯಿತಿಗೆ ನೀರು ಪೂರೈಕೆ ಮಾಡಲು









ಎದುರಾದ ಸವಾಲುಗಳು:

ಕಡಬ ತಾಲ್ಲೂಕು ಬಹುತೇಕ ಬೆಟ್ಟಗುಡ್ಡ, ಅರಣ್ಯ ಪ್ರದೇಶಗಳಿಂದ ಕೂಡಿದೆ. ಬಹುತೇಕ ಮನೆಗಳು ಇರುವ ಪ್ರದೇಶ ಭೌಗೋಳಿಕವಾಗಿ ಏರಿಳಿತಗಳಿಂದ ಕೂಡಿದ್ದು ಸಮಪರ್ಕವಾಗಿ ಪೈಪ್ಲೈನ್ ಅಳವಡಿಕೆ ಮತ್ತು ಸಮರ್ಪಕ ರೀತಿಯಲ್ಲಿ ನೀರು ಒದಗಿಸುವುದು ಸವಾಲಾಗಿತ್ತು . ಹೀಗಾಗಿ ಜಲ ಜೀವನ್ ಮಿಷನ್ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಕಷ್ಟಕರವಾಗಿತ್ತು.

ಜೀವನಕ್ಕೆ ಮೂಲಭೂತ ಅವಶ್ಯಕತೆಯಾದ ನೀರನ್ನು ಪಡೆದುಕೊಳ್ಳಬೇಕು ಎಂಬ ಛಲ ಗ್ರಾಮಸ್ಥರಲ್ಲಿದ್ದ ಕಾರಣ ಸವಾಲುಗಳನ್ನು ಸೂಕ್ತವಾಗಿ ಎದುರಿಸಿದರು. ಜೊತೆಗೆ ಸಮುದಾಯ ವಂತಿಗೆಯನ್ನು ಸಕಾಲದಲ್ಲಿ ಪಾವತಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಹಕಾರ ನೀಡಿದರು. ಕೇಂದ್ರ, ರಾಜ್ಯ ಸರಕಾರದ ಅನುದಾನ, ಪಂಚಾಯಿತಿಯ 15ನೇ ಹಣಕಾಸು ನಿಧಿ ಮತ್ತು ಫಲಾನುಭವಿಗಳಿಂದ ಸಂಗ್ರಹಿಸಿದ ಸಮುದಾಯ ವಂತಿಗೆ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಗ್ರಾಮ ಪಂಚಾಯಿತಿ ಅಧಿಕಾರಿಗಳ ಜೊತೆಗೆ ಗ್ರಾಮಸ್ಥರ ಬೆಂಬಲ ಯೋಜನೆಗೆ ದೊರಕಿದೆ.

ಗ್ರಾಮದ ಮನೆಗಳಿಗೆ ಕಾರ್ಯಾತ್ಮಕ ನಳ ಸಂಪರ್ಕದ ಮೂಲಕ ಪ್ರತಿದಿನ ಪ್ರತಿಯೊಬ್ಬರಿಗೂ 55ಲೀ ಕುಡಿಯುವ ನೀರಿನ ಸೌಕರ್ಯ ಒದಗಿಸಲಾಗಿದೆ. ಈ ಮೂಲಕ ಜನರ ಉತ್ತಮ ಆರೋಗ್ಯ ಮತ್ತು ಉತ್ತಮ ಆರ್ಥಿಕ ಪರಿಸ್ಥಿತಿಗೂ ಯೋಜನೆ ಕೊಡುಗೆ ನೀಡಿದೆ.

ಅಂಗನವಾಡಿಗಳಲ್ಲೂ ಕುಡಿಯುವ ನೀರಿಗೆ ಪರದಾಡುತ್ತಿದ್ದರು. ಅಂಗನವಾಡಿಗೆ ಕುಡಿಯುವ ನೀರಿಗೆ ಆಧಾರವಾಗಿದ್ದ ಕೈ ಪಂಪು ಬತ್ತಿ ಹೋದ ಪರಿಣಾಮ ಮತ್ತಷ್ಟು ನೀರಿನ ಸಮಸ್ಯೆ ಎದುರಾಗಿತ್ತು. ಇದನ್ನು ಗಮನಿಸಿ ಪಂಚಾಯಿತಿ ವತಿಯಿಂದ ಅಂಗನವಾಡಿಗೆ ನಳ ಸಂಪರ್ಕ ಕಲ್ಪಿಸಲಾಗಿದೆ. ಜೊತೆಗೆ ಹತ್ತಿರವೇ 20ಸಾವಿರ ಲೀಟರ್ ಸಾಮರ್ಥ್ಯದ ನೆಲಮಟ್ಟದ ಟ್ಯಾಂಕ್ ನಿರ್ಮಿಸಲಾಗಿದೆ. ಇದರಿಂದ ಗ್ರಾಮದ ಜನರು ನಿರಾಳರಾಗಿದ್ದಾರೆ.

ಒಂದು ಬಾರಿ ಗ್ರಾಮದಲ್ಲಿ ಜಲ ಜೀವನ್ ಮಿಷನ್ ಯೋಜನೆ ಅನುಷ್ಠಾನಗೊಂಡರೆ ಮುಂದಿನ 30 ವರ್ಷಗಳಿಗೆ ತೊಂದರೆ ಇಲ್ಲವೆಂದು ಗ್ರಾಮ ಪಂಚಾಯಿತಿ ಮತ್ತು ಗ್ರಾಮಸ್ಥರು ಮನಗಂಡಿದ್ದಾರೆ. ಜೊತೆಗೆ ಸುಸ್ಥಿರತೆ ಕಾಪಾಡಲು ಗ್ರಾಮದಲ್ಲಿ ಜಲ ಮರುಪೂರಣ ಮತ್ತು ಜಲಮೂಲಗಳ ಸಂರಕ್ಷಣೆ, ಅಂತರ್ಜಲ ಮಟ್ಟ ಹೆಚ್ಚಿಸಲು ಕಾರ್ಯೋನ್ಮುಖರಾಗಿದ್ದಾರೆ. ಅದರಂತೆ ಕೆರೆ ಕಟ್ಟೆಗಳ, ಕಿಂಡಿ ಅಣೆಕಟ್ಟುಗಳ ನಿರ್ಮಾಣ ಮಾಡಲಾಗುತ್ತಿದೆ. ಜೊತೆಗೆ ಇಂಗು ಗುಂಡಿಗಳ ನಿರ್ಮಾಣವನ್ನು ಪ್ರತಿ ಮನೆಯಲ್ಲೂ ನಿರ್ಮಿಸಲು ಉತ್ತೇಜನ ನೀಡಲಾಗುತ್ತಿದೆ. ಮೊದಲ ಹಂತದ ಕಾಮಗಾರಿಗಳು ಈಗಾಗಲೇ ಅನುಷ್ಠಾನಗೊಂಡು 2 ವರ್ಷ ಕಳೆದಿದೆ. ಸಮರ್ಪಕ ರೀತಿಯಲ್ಲಿ ಶುದ್ಧ ಕುಡಿಯುವ ನೀರಿನ ಪೂರೈಕೆಯಾಗುತ್ತಿದೆ. ಈ ಮೂಲಕ ಸಮರ್ಪಕ ನೀರು ಪೂರೈಕೆ ಮತ್ತು ಸುಸ್ಥಿರ ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ

ಗ್ರಾಮ ಪಂಚಾಯತಿಯ ಸಮಗ್ರ ಅಭಿವೃದ್ಧಿಗಾಗಿ ಗಾಂಧಿ ಗ್ರಾಮ ಪುರಸ್ಕಾರ ದೊರೆತಿದೆ. ಈ ಬಾರಿ ಕಡಬ ತಾಲೂಕಿನಲ್ಲಿ ಈ ಪ್ರಶಸ್ತಿಯನ್ನು ಪಡೆದಿರುವ 2ನೇ ಗ್ರಾಮ

ಜಲ ಜೀವನ್ ಮಿಷನ್ ಮಹತ್ವದ ಯೋಜನೆಯಾಗಿದ್ದು ದೇಶದ ಜನರ ಮೂಲಭೂತ ಅವಶ್ಯಕತೆಯಾದ ಕುಡಿಯುವ ನೀರನ್ನು ಅವರ ಮನೆಯ ಬಾಗಿಲಿಗೆ ಕಾರ್ಯಾತ್ಮಕ ನಳ ಸಂಪರ್ಕದ ಮೂಲಕ ಒದಗಿಸಿದೆ. ಯೋಜನೆಯು ದೇಶದ ಸುಸ್ಥಿರ ಮತ್ತು ಸರ್ವಾಂಗೀಣ ಅಭಿವೃದ್ಧಿಗೆ ಕೊಡುಗೆ ನೀಡುತ್ತಿದೆ.

**ನೀರು ಮತ್ತು ನೈರ್ಮಲ್ಯ ಕುರಿತ ಸಮಸ್ಯೆಗಳಿಗೆ ಪರಿಹಾರ ಸಹಾಯವಾಣಿ 9480985555 ಗೆ ಕರೆ ಮಾಡಿ**